**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ.</u>**

CC No.1685/2023

CW-6/PW-5

ಹೆಸರು : ರಮೇಶ ಹಾಲಪ್ಪ ರಾಜಾಪುರೆ
ವಯಸ್ಸು : 36 ವರ್ಷ
ಉದ್ಯೋಗ : ಪೊಲೀಸ್ ಪೇದೆ, 3092 ಯಮಕನಮರಡಿ ಪೋಲಿಸ್ ಠಾಣೆ.
ವಾಸಸ್ಥಳ : ಯಮಕನಮರಡಿ.

**(ದಿನಾಂಕಃ16.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**<u>ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಸಹಾಯಕ ಸರಕಾರಿ ಅಭಿಯೋಜಕರಿಂದ</u>**

1. ನಾನು 2022 ರಿಂದ 2026 ರವರೆಗೆ ಯಮಕನಮರಡಿ ಪೋಲಿಸ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 5-7-2023 ರಂದು ಸಾಯಂಕಾಲ 5-00 ಗಂಟೆಗೆ ನಾನು, ಮತ್ತುಚಾಸಾ-1 ರವರು ಬೀರನಹೋಳಿ ಗ್ರಾಮದಲ್ಲಿ ಪ್ಯಾಟ್ರೊಲಿಂಗ್ ಮಾಡುತ್ತಿದ್ದಾಗ ಚಾಸಾ-1 ರವರಿಗೆ ಖಾತ್ರಿ ಭಾತ್ಮಿ ಬಂದಿದ್ದು ಅದರಲ್ಲಿ ಇಸ್ಲಾಂಪೂರ ಗ್ರಾಮದ ಬಸ್ ನಿಲ್ದಾಣದ ಮುಂದೆ ಒಬ್ಬ ವೆಂಕಟೇಶ ರಾಮು ಬಾಯಣ್ಣವರ ಎಂಬುವವನು ಅಕ್ರಮವಾಗಿ ತನ್ನ ತಾಬಾದಲ್ಲಿ ಕೈಚೀಲದಲ್ಲಿ ಸಾರಾಯಿ ಟೆಟ್ರಾ ಪ್ಯಾಕೆಟಗಳನ್ನು ಇಟ್ಟುಕೊಂಡು ಮಾರಾಟ ಮಾಡಲು ಸಾಗಾಟ ಮಾಡುತ್ತಿದ್ದಾನೆ ಎಂದು ಬಾತ್ಮಿ ಬಂದಿದ್ದು, ನಂತರ ಚಾಸಾ-1 ರವರು ಕೂಡಲೇ ಚಾಸಾ-4 ಮತ್ತು 5 ರವರಿಗೆ ಪೋನ ಮಾಡಡಿ ತನಿಖಾ ಸಾಮಗ್ರಿಗಳನ್ನು ಹಾಗೂ ಇಬ್ಬರು ವ್ಯಕ್ತಿಗಳನ್ನು ಪಂಚರನ್ನಾಗಿ ಕರೆದುಕೊಂಡು ಕಲ್ಲಟ್ಟಿ ಕ್ರಾಸ ಹತ್ತಿರ ಬರಲು ತಿಳಿಸಿದರು. ಆ ಪ್ರಕಾರ ಚಾಸಾ-4 ಮತ್ತು 5 ಇವರು ಪಂಚರಾದ ಬಸವರಾಜ ಸತ್ಯಪ್ಪ ಶಿರಗಣ್ಣವರ ಹಾಗೂ ರಮೇಶ ಸಿದ್ದಪ್ಪ ಬೆಣ್ಣಿ ಸಾಃ ಇಬ್ಬರೂ ಇಸ್ಲಾಂಪೂರ ಇವರಿಗೆ ಕರೆದುಕೊಂಡು ಸಾಯಂಕಾಲ 5-45 ರ ಸುಮಾರಿಗೆ ಕಲ್ಲಟ್ಟಿ ಕ್ರಾಸ ಹತ್ತಿರ ಬಂದು ಪಿ ಎಸ್ ಐ ಸಾಹೇಬರ ಮುಂದೆ ಪಂಚರನ್ನು ಹಾಜರ ಪಡಿಸಿದರು.

3. ಪಿ ಎಸ್ ಐ ರವರು ಪಂಚರಿಗೆ ಮಾಹಿತಿ ಬಂದ ವಿಚಾರ ತಿಳಿಸಿ ನಂತರ ನಾವೆಲ್ಲರೂ ನಮ್ಮ ಪೋಲಿಸ ಜೀಪ ನಂ. ಕೆಎ-22 ಜಿ 577 ರಲ್ಲಿ ಕಲ್ಲಟ್ಟಿ ಕ್ರಾಸನ್ನು 5-50 ಕ್ಕೆ ಬಿಟ್ಟು ನಮಗೆ ಬಾತ್ಮಿ ಬಂದ ಸ್ಥಳಕ್ಕೆ ಸಂಜೆ 6-10 ಕ್ಕೆ ಇಸ್ಲಾಂಪೂರ ಗ್ರಾಮಕ್ಕೆ ಹೋಗಿ ಬಸ್ ನಿಲ್ದಾಣದ ಹೋಗಿ ಸಮೀಪ ತುಸು ದೂರದಲ್ಲಿ ನಮ್ಮ ವಾಹನವನ್ನು ಮರೆಯಲ್ಲಿ ನಿಲ್ಲಿಸಿ ವಾಚ್ ಮಾಡುತ್ತಿರುವಾಗ, ಬಸ್ ನಿಲ್ದಾಣದ ಮುಂಭಾಗ ಒಬ್ಬ ವ್ಯಕ್ತಿ ಕೈಚೀಲ ಹಿಡಿದುಕೊಂಡು ಕುಳಿತಿದ್ದು ಆತನಿಗೆ ಪಿಸಿ 3263 ಬೆಣ್ಣೆ ಇವರು ಹಿಡಿದುಕೊಂಡರು. ನಾವೆಲ್ಲರೂ ಹೋಗಿ ಆತನ ಕೈಚೀಲವನ್ನು ಚೆಕ ಮಾಡಲಾಗಿ ಅದರಲ್ಲಿ 90 ಎಮ್ ಎಲ ನ 68 ಓರಿಜಿನಲ ಚಾಯಿಸ ವಿಸ್ಕಿ ತುಂಬಿದ ಟೆಟ್ರಾ ಪ್ಯಾಕೇಟುಗಳು ಇದ್ದವು. ನಂತರ ಪಿ ಎಸ್ ಐ ಸಾಹೇಬರ ಆತನ ಹೆಸರನ್ನು ಕೇಳಲಾಗಿ ಆತನ ಹೆಸರು ವೆಂಕಟೇಶ ರಾಮು ಬಯಣ್ಣವರ, ವಯಸ್ಸು 35 ವರ್ಷ ಸಾಃ ಇಸ್ಲಾಂಪೂರ ಎಂದು ಹೇಳಿದ.

4. ಆತನ ಬಳಿ ಟೆಟ್ರಾ ಪ್ಯಾಕೆಟಗಳನ್ನು ಮಾರಾಟ ಮಾಡಲು ಸಂಬಂಧಪಟ್ಟ ಇಲಾಖೆಯಿಂದ ಪಾಸ ವ ಪರಿಮಿಟ ಕೇಳಿದಾಗ ಇಲ್ಲ ಎಂದು ತಿಳಿಸಿರುತ್ತಾನೆ. ಆಗ ಸದರಿ ವ್ಯಕ್ತಿ ಸಂಬಧಪಟ್ಟ ಇಲಾಖೆಯಿಂದ ಅನುಮತಿ ಪಡೆಯದೆ ತನ್ನ ಸ್ವಂತ ಪಾಯಿದೆಗೋಸ್ಕರ ಬೇಕಾಯಿದೆಶೀರ ರೀತಿಯಿಂದ ಮಾರಾಟ ಮಾಡಲು ತನ್ನ ಬಳಿ ಇಟ್ಟುಕೊಂಡಿರುತ್ತಾನೆ ಎಂದು ತಿಳಿದು ಕೂಡಲೇ ಹಾಜರ ಇದ್ದ ಪಂಚರ ಸಮಕ್ಷಮ ತಪಾಸಣೆ ಮಾಡಿದ್ದು ಅವನ ತಾಬಾದಲ್ಲಿದ್ದ ಒಂದು ಬಿಳಿ ಬಣ್ಣದ ಕೈಚೀಲ ಅದರಲ್ಲಿ ಸ್ಯಾಂಪಲಗಾಗಿ 90 ಎಮ್ ಎಲ ನ 2 ಓರಿಜಿನಲ ಚಾಯಿಸ ವಿಸ್ಕಿ ತುಂಬಿದ ಟೆಟ್ರಾ ಪ್ಯಾಕೇಟುಗಳನ್ನು ತೆಗೆದಿರಿಸಿ ಬಿಳಿ ಬಟ್ಟೆಯಿಂದ ಪ್ಯಾಕ ಮಾಡಿ ಪಂಚನಾಮೆ ಜರುಗಿಸಿ ಪಂಚರ ಸಹಿ ಇದ್ದ ಚೀಟಿ ಅಂಟಿಸಿ ಅರಗಿನಿಂದ ಶೀಲು ಮಾಡಲಾಯಿತು. ಸದ್ರಿ ಸ್ಥಳದಲ್ಲಿ ಸಂಜೆ 6-20 ರಿಂದ 7-15 ರವರೆಗೆ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಪಂಚನಾಮೆಯನ್ನು ಬೆಣ್ಣೆ ಪೋಲಿಸರು ಬರೆದರು. ಆರೋಪಿಯನ್ನು ವಶಕ್ಕೆ ಪಡೆದು ಚಾಸಾ-1 ರವರು ಸರಕಾರದ ಪರವಾಗಿ ಸ್ವದೂರನ್ನು ಸಲ್ಲಿಸಿರುತ್ತಾರೆ.

5. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ನ್ಯಾಯಾಲಯದ ಮುಂದೆ ಇರುವ ಸ್ಯಾಂಪಲ ಪ್ಯಾಕೆಟನ್ನು ಮೂಮಾ-1ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ದಿಃ 14.07.2023 ರಂದು ನಾನು ಸ್ಯಾಂಪಲ್ ಪ್ಯಾಕೆಟ್ ಅನ್ನು ಧಾರವಾಡದ ಎಫ್ ಎಸ್ ಎಲ್ ಗೆ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿಸಿ

ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-8 ಎಂದು, ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ-8(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಆರ್ ಬಿ ಸಿ ವಕೀಲರಿಂದ –</u>**

6. ನಾನು ಠಾಣೆ ಬಿಡುವ ಮುಂಚೆ ಆ ವ್ಯಕ್ತಿಯ ಫೋಟೊ ಅಥವಾ ಮುಖ ಚೆಹರೆ ಇತ್ತಾ ಎಂಬ ಪ್ರಶ್ನೆಗೆ ಇಲ್ಲ ಎಂದು ಹೇಳುತ್ತಾರೆ. ಆ ವ್ಯಕ್ತಿಯ ಫೋಟೊ ಅಥವಾ ಮುಖ ಚೆಹರೆ ಇರುವುದಿಲ್ಲ. ಇಸ್ಲಾಂಪೂರ ಗ್ರಾಮದ ಬಸ್ ನಿಲ್ದಾಣದಲ್ಲಿ ಸಾಕಷ್ಟು ಜನ ವಾಸಿಸುವ ಮನೆಗಳು ಇವೆ ಎಂದರೆ ನಿಜ. ಸಾಕಷ್ಟು ಜನರ ಹತ್ತಿರ ಕೈಚೀಲಗಳು ಇರುತ್ತವೆ ಎಂದರೆ ನಿಜ. ಸಾಕ್ಷಿ ಅಲ್ಲಿ ಸಾಕಷ್ಟು ಜನ ಇರಲಿಲ್ಲ ಎಂದು ಹೇಳುತ್ತಾರೆ. ಯಮಕನಮರಡಿ ಪೋಲಿಸ ಠಾಣೆಯಿಂದ ಇಸ್ಲಾಂಪೂರ ಗ್ರಾಮಕ್ಕೆ 25 ಕಿ.ಮೀ ಅಂತರ ಇರುತ್ತದೆ. ಯಮಕನಮರಡಿ ಪೋಲಿಸ ಠಾಣೆಯಿಂದ ಇಸ್ಲಾಂಪೂರ ಗ್ರಾಮಕ್ಕೆ ಹೋಗಲು 2 ಮಾರ್ಗಗಳು ಇದ್ದು ನಾವು ಕಲ್ಲಟ್ಟಿ ಗ್ರಾಮದ ಮೂಲಕ ಹೋದೆವು.

7. ಸದರಿ ಕೈಚೀಲ ಬಿಳಿ ಬಣ್ಣದ್ದು ಇತ್ತು. ಅದರ ಮೇಲೆ ಕಂಪನಿ ಹೆಸರು ನಮೂದು ಇರಲಿಲ್ಲ. ಸದರಿ ಕೈಚೀಲದ ಉದ್ದ ಅಳತೆ ನಮೂದು ಮಾಡಿಲ್ಲ. ಸಾರಾಯಿ ಪ್ಯಾಕೆಟಗಳಿಗೆ ಸೀರಿಯಲ್ ನಂಬರ ಇರುತ್ತದೆ ಎಂದರೆ ನಿಜ. ಸದರಿ ಸೀರಿಯಲ ನಂಬರಗಳ್ನು ನಾವು ನಮೂದು ಮಾಡಿರುವುದಿಲ್ಲ. ಸದರಿ ಸೀರಿಯಲ ನಂಬರ ಮೂಲಕ ಯಾವ ಅಂಗಡಿ ಮೂಲಕ ಬಂದಿದೆ ಎಂದು ಪತ್ತೆ ಹಚ್ಚಬಹುದು ಎಂದರೆ ಅದು ನನ್ನ ಕೆಲಸ ಅಲ್ಲ, ಐಓ ಪತ್ತೆ ಹಚ್ಚಬೇಕು ಎನ್ನುತ್ತಾರೆ. ಸದರಿ ವ್ಯಕ್ತಿ ಕಡೆಯಿಂದ ಮಾಲನ್ನು ಜಪ್ತಿ ಮಾಡಿಕೊಂಡ ಬಗ್ಗೆ ಆತನಿಗೆ ಲಿಸ್ಟ ಕೊಟ್ಟು ಸಹಿ ನಾನು ಪಡೆದುಕೊಂಡಿಲ್ಲ, ಐಓ ಪಡೆದುಕೊಂಡಿರಬಹುದು.

8. ಮುಮಾ-1 ರ ತಹರದ ಸಾರಾಯಿ ಪ್ಯಾಕೆಟಗಳು ವೈನ್ ಶಾಪನಲ್ಲಿ ಸಿಗುತ್ತವೆ ಎಂದರೆ ನಿಜ. ಚಾಸಾ-1 ನನ್ನ ಮೇಲಾಧಿಕಾರಿ ಎದರೆ ನಿಜ. ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿ ತಿಂಗಳು ನಮ್ಮ ಸಾಹೇಬರು ಮೀಟಂಗ ಕರೆಯುತ್ತಾರೆ ಎಂದರೆ ನಿಜ. ನಮಗೆ ಇಂತಿಷ್ಟು ಕೇಸ ಮಾಡಬೇಕೆಂಬ ಟಾರಗೆಟ ಇರುತ್ತದೆ

ಎಂದರೆ ನಿಜ. FSL ಗೆ ನಾನು ಯಾವುದೇ ಸ್ಯಾಂಪಲ್ ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ.

9. ನಾನು ಈಗ ಪಿ.ಎಫ್ ದಾಖಲೆ ನೋಡುತ್ತಿದ್ದು ಅದರಲ್ಲಿ 26.06.2023 ಎಂದು ದಿನಾಂಕ ನಮುದಾಗಿದೆ ಎಂದರೆ ನಿಜ. ಸದರಿ ದಿನಾಂಕವನ್ನು ಅಭಿಮುಖವಾಗಿ ತೋರಿಸಿದ್ದು ಅದನ್ನು ಸಾಕ್ಷಿಯು ನೋಡಿ ಒಪ್ಪಿದ್ದು ಅದನ್ನು ನಿ.ಡಿ-2 ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ಕಚ್ಚಾ ನಕಾಶೆ ತೆಗೆದಿರುವುದಿಲ್ಲ. ಆ ಸ್ಥಳಕ್ಕೆ ಹೋಗಿದ್ದೆವು ಎಂದು ತೋರಿಸಲು ಫೋಟೊ ಅಥವಾ ಕಚ್ಚಾ ನಕಾಶೆ ತೆಗೆದಿರುವುದಿಲ್ಲ. ನಾನು ಆ ದಿನ ಯಾವುದೇ ರೇಡಿಗೂ ಹೋಗಿಲ್ಲ, ಹಾಗೂ ಅಲ್ಲಿ ಯಾವುದೇ ಸಾರಾಯಿ ಪ್ಯಾಕೆಟನ್ನು ಆರೊಪಿ ಕಡೆಯಿಂದ ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಸಂಖ್ಯೆಗಾಗಿ ಈ ರೀತಿ ಸುಳ್ಳು ಪ್ರಕರಣ ದಾಖಲ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

**(ಆದಿತ್ಯ ಆರ್. ಕಲಾಲ್)**
**ಸಿ.ಜೆ ಮತ್ತು ಜೆ.ಎಂ.ಎಫ್.ಸಿ, ಹುಕ್ಕೇರಿ.**